
# ‘ಶ್ರೀರಾಮಕೃಷ್ಣ-ಶಾರದಾ ಉಪನಿಷತ್’




**ಕೃತಿ:** ಶ್ರೀರಾಮಕೃಷ್ಣ-ಶಾರದಾ ಉಪನಿಷತ್
**ಲೇಖಕ :** ಡಾ. ಎ. ಮಾಧವ ಉಡುಪ
**ಪ್ರಕಾಶನ :** ನಿರಂತರ
165, 8ನೇ ಎ ಕ್ರಾಸ್, 14ನೇ ಎ ಮೇನ್
ಆರ್‌ಪಿಸಿ ಲೇಔಟ್, ವಿಜಯನಗರ,
ಬೆಂಗಳೂರು
ಮೊ.: 9731135044
**ಬೆಲೆ:** 600/- **ಪುಟ:** 576

ಶ್ರೀರಾಮಕೃಷ್ಣ ಪರಮಹಂಸರ ಮತ್ತು ಶ್ರೀಶಾರದಾದೇವಿಯವರ ಬೋಧನೆಗಳು ನಮ್ಮ ಜೀವನಕ್ಕೆ ಹೇಗೆ ಆಧ್ಯಾತ್ಮಿಕ ದಾರಿದೀಪಗಳಾಗಿ ನಮ್ಮನ್ನು ಮುನ್ನಡೆಸಬಲ್ಲವು ಎಂಬ ವಿಚಾರವನ್ನು ವಿಶದಪಡಿಸುವ ಒಂದು ಅಪೂರ್ವ ಗ್ರಂಥವು ಪ್ರಕಟವಾಗಿ ಹೊರಬಂದಿದೆ. ಅದೇ **‘ಶ್ರೀರಾಮಕೃಷ್ಣ-ಶಾರದಾ ಉಪನಿಷತ್’**. ಲೇಖಕರು ಡಾ. ಮಾಧವ ಉಡುಪ ಅವರು; ಸುದೀರ್ಘಕಾಲ ಪತ್ರಿಕೋದ್ಯಮದಲ್ಲಿ ನಿರತರು; ರಾಮಕೃಷ್ಣ-ವಿವೇಕಾನಂದ ಭಾವಧಾರೆಯಲ್ಲಿ ಮಿಂದೆದ್ದವರು. ಈ ಕೃತಿಯ ಶೀರ್ಷಿಕೆಯೊಂದಿಗೆ ‘ಸಾರ್ಥಕ ಜೀವನಕ್ಕೆ ಸುಲಭ ಸಂಹಿತೆ’ ಎಂಬ ಉಪಶೀರ್ಷಿಕೆಯನ್ನೂ ಕೊಡಲಾಗಿದೆ. ಬೃಹತ್ ಗಾತ್ರದ ಈ ಗ್ರಂಥದಲ್ಲಿ ವಿಸ್ತಾರವಾಗಿ ವಿವರಿಸಿರುವ ವಿಷಯ ವೈವಿಧ್ಯಗಳೂ ಅಷ್ಟೇ ಬೃಹತ್ತಾದವು. ಮೌಲಿಕವಾಗಿ ಅತ್ಯಂತ ಶ್ರೇಷ್ಠವಾದವು. ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆ ಶಾರದಾದೇವಿಯವರ ವಚನಗಳನ್ನು ‘ಉಪನಿಷತ್’ ಎಂದೇ ಕರೆದಿರುವ ಲೇಖಕರು, ‘ಶ್ರೀರಾಮಕೃಷ್ಣ ವಚನ ವೇದ’ಕ್ಕೆ ರಾಷ್ಟ್ರಕವಿ ಕುವೆಂಪು ಅವರು ಬರೆದಿರುವ ಮುನ್ನುಡಿಯನ್ನು ನೆನಪಿಸುತ್ತಾರೆ. ಶ್ರೀರಾಮಕೃಷ್ಣರ ನುಡಿಗಳು ವೇದಕ್ಕೆ ಸಮಾನ ಎಂಬ ಅವರ ವ್ಯಾಖ್ಯಾನದ ನೆರಳಿನಲ್ಲೇ ಈ ಗ್ರಂಥದಲ್ಲಿ ಈ ಉಪದೇಶಗಳನ್ನು ‘ಉಪನಿಷತ್’ಎನ್ನಲಾಗಿದೆ. ಉಪನಿಷತ್ತುಗಳು ವೇದಗಳ ಭಾಗವಾಗಿವೆ; ವೇದಗಳ ಸಾರವೂ ಆಗಿವೆ. ಸತ್ಯದ ಸಾಕ್ಷಾತ್ಕಾರದಿಂದ ಉಕ್ಕಿ ಹರಿದ ಭಾವ ಲಹರಿಯನ್ನು ಅಲ್ಲಿನ ಮಂತ್ರಗಳಲ್ಲಿ ಕಾಣುತ್ತೇವೆ. ಅದೇ ರೀತಿ, ಶ್ರೀರಾಮಕೃಷ್ಣರು ಭಕ್ತರ ಮುಂದೆ ಆಡುತ್ತಿದ್ದ ಮಾತುಗಳು ಸಮಾಧಿಗರ್ಭದಿಂದ ಉದಿಸಿಬಂದ ಅಮೃತತುಲ್ಯವಾದ ಬೋಧನೆಗಳಾಗಿವೆ. ಶ್ರೀಮಾತೆಯವರ ಬೋಧನೆಗಳೂ ಅಷ್ಟೇ ದಿವ್ಯವೂ ಪ್ರಾಯೋಗಿಕವೂ ಸಾರ್ವತ್ರಿಕವೂ ಆಗಿದೆ. ಇವರಿಬ್ಬರ ಬೋಧನೆಗಳನ್ನು ಉಪನಿಷತ್ತು , ವೇದ, ಗೀತೆಗಳ ಹತ್ತು ಹಲವು ವಾಕ್ಯಗಳೊಂದಿಗೆ ಸಮೀಕರಿಸುತ್ತ, ನಮ್ಮ ನಿತ್ಯಜೀವನದಲ್ಲಿ ಇವು ಎಂಥ ಅಮೂಲ್ಯ ಆದರ್ಶಗಳಾಗಿವೆ ಎಂಬುದನ್ನು ಹಲವು ಪ್ರಮಾಣ-ವಾದಸರಣಿಗಳಿಂದ ಪುಷ್ಟೀಕರಿಸುತ್ತ ಇಲ್ಲಿ ವಿವರಿಸಲಾಗಿದೆ.

ಈ ಗ್ರಂಥದಲ್ಲಿ ಐದು ಅಧ್ಯಾಯಗಳಿವೆ: ೧)**‘ಉಪನಿಷತ್-ಆಧ್ಯಾತ್ಮದ ಎತ್ತರಕ್ಕೆ ಭಗವಂತನ ಹತ್ತಿರಕ್ಕೆ?’** ಈ ಅಧ್ಯಾಯದಲ್ಲಿ ಉಪನಿಷತ್ತುಗಳ ಸಾಮಾನ್ಯ ತತ್ತ್ವ, ಅವುಗಳು ತೋರಿಸಿಕೊಡುವ ಜೀವನಾದರ್ಶ, ಅಲ್ಲಿ ಬರುವ ಆತ್ಮತತ್ತ್ವವು ಹೇಗೆ ಶ್ರೀರಾಮಕೃಷ್ಣ, ಶಾರದಾದೇವಿಯವರ ಮಾತುಗಳಿಗೆ ಹತ್ತಿರವಾಗಿದೆ ಎಂಬುದನ್ನು ವಿವಿಧ ಉದಾಹರಣೆ ಮತ್ತು ವಿವರಣೆಗಳೊಂದಿಗೆ ಚಿತ್ರಿಸಲಾಗಿದೆ. ೨) **‘ಸಂಸಾರಿಗಳಿಗೆ ಶ್ರೀರಾಮಕೃಷ್ಣ-ಶಾರದಾ ಉಪನಿಷತ್’** ಎಂಬ ಈ ಅಧ್ಯಾಯದಲ್ಲಿ ಪ್ರಧಾನವಾಗಿ, ಸಾಂಸಾರಿಕ ಜೀವನವನ್ನು ಹೇಗೆ ನಡೆಸಬೇಕೆಂಬುದನ್ನು ಕುರಿತು ಶ್ರೀರಾಮಕೃಷ್ಣರು, ಶ್ರೀಮಾತೆಯವರು ಜನಸಾಮಾನ್ಯರಿಗೆ ನೀಡಿದ ಉಪದೇಶಗಳನ್ನು ಆಧಾರವಾಗಿಟ್ಟುಕೊಂಡು ವಿವರಿಸಲಾಗಿದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದ ಹತ್ತಾರು ದೃಷ್ಟಾಂತ ಕತೆಗಳನ್ನು ವಿವರಿಸುತ್ತ ಇಲ್ಲಿ ನೀಡುವ ವಿವರಣೆಗಳು ಅತ್ಯಂತ ಮನಮುಟ್ಟುವಂತಿವೆ. ಅದೇ ಕಥೆ, ಅದೇ ಬೋಧನೆ; ಆದರೆ ಇಲ್ಲಿ ಲೇಖಕರ ವಿನೂತನ ಶೈಲಿಯಲ್ಲಿ ಹೊಸ ರೂಪವನ್ನು ಪಡೆದುಕೊಂಡಿವೆ. ೩) **‘ಸಾಧಕರಿಗೆ ಶ್ರೀರಾಮಕೃಷ್ಣ-ಶಾರದಾ ಉಪನಿಷತ್’** ಎಂಬ ಈ ಅಧ್ಯಾಯದಲ್ಲಿ ಆಧ್ಯಾತ್ಮಿಕ ಸಾಧಕರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನೀಡಿರುವ ಉಪದೇಶಗಳ ವಿವರಣೆ ಹಾಗೂ ವಿಶ್ಲೇಷಣೆಯಿದೆ. ಜೊತೆಜೊತೆಗೇ ಇವರಿಬ್ಬರ ಜೀವನದ ಹಲವು ನಿದರ್ಶನಗಳೂ ಇಲ್ಲಿ ಬರುವುದರಿಂದ, ಓದುಗರಿಗೆ ದಿವ್ಯತ್ರಯರ ಜೀವನದ ಹಲವು ಅದ್ಭುತ ಘಟನೆಗಳನ್ನೂ ಮೆಲುಕು ಹಾಕಿದಂತಾಗುತ್ತದೆ. ೪) **‘ಮುಮುಕ್ಷುಗಳಿಗೆ ರಾಮಕೃಷ್ಣ-ಶಾರದಾ ಉಪನಿಷತ್’** ಈ ಅಧ್ಯಾಯದಲ್ಲಿ ಭಗವಂತನ ಸಾಕ್ಷಾತಕಾರವನ್ನು ಬಯಸುವ ಆಧ್ಯಾತ್ಮಿಕ ಅನ್ವೇಷಕರಿಗೆ ಸಂಬಂಧಪಟ್ಟ ಅನೇಕ ಉಪದೇಶಗಳ ವಿವರಣೆಯಿದೆ. ಹಿಂದಿನ ಅಧ್ಯಾಯಕ್ಕೂ (ಸಾಧಕರಿಗೆ...), ಈ ಅಧ್ಯಾಯಕ್ಕೂ (‘ಮುಮುಕ್ಷುಗಳಿಗೆ..) ಇರುವ ವ್ಯತ್ಯಾಸವೇನು? ಸಾಧಕರಿಗೂ ಮುಮುಕ್ಷುಗಳಿಗೂ ವ್ಯತ್ಯಾಸವೇನು? - ಎಂಬ ಪ್ರಶ್ನೆಗಳು ಇಲ್ಲಿ ಮೂಡುವುದು ಸಹಜ. ಒಂದರಲ್ಲಿ ಸಾಧನೆಯ ಮಾರ್ಗ ಮುಖ್ಯವಾಗಿದೆ, ಇನ್ನೊಂದರಲ್ಲಿ ಗಮ್ಯಸ್ಥಾನವಾದ ಭಗವಂತನ ವಿಚಾರ ಮುಖ್ಯವಾಗಿದೆ ಎನ್ನಬೇಕು. ಎರಡೂ ಪರಸ್ಪರ ಪೂರಕವಾಗಿದೆ; ವಾಸ್ತವವಾಗಿ ವಿಷಯ-ವಿವರಣೆಯಲ್ಲಿ ಭಿನ್ನತೆ ಕಡಿಮೆ. ೫) **‘ಸಾರ್ಥಕ ಜೀವನಕ್ಕಿದೇ ದಾರಿದೀಪ’**-ಇದು ಕೊನೆಯ ಅಧ್ಯಾಯ. ಇಡೀ ಗ್ರಂಥದ ಒಟ್ಟು ಸಾರರೂಪವನ್ನಿಲ್ಲಿ ಸಂಗ್ರಹಿಸಿ ನೀಡಲಾಗಿದೆ; ಶ್ರೀರಾಮಕೃಷ್ಣರ ಮತ್ತು ಶ್ರೀಶಾರದಾದೇವಿಯವರ ಉಪದೇಶಗಳು ಹೇಗೆ ಅತ್ಯುತ್ತಮ ಬದುಕಿಗೆ ಮಾರ್ಗದರ್ಶಿಯಾಗಿ ಅಸಮಾನ್ಯ ಸ್ಫೂರ್ತಿ, ಪ್ರೇರಣೆ ನೀಡಬಲ್ಲವು ಎಂದು ಇಲ್ಲಿ ತೋರಿಸಿಕೊಡಲಾಗಿದೆ. ಉತ್ತಮ ಮುದ್ರಣ, ಗುಣಮಟ್ಟದ ಬೈಂಡಿಂಗ್, ಮುನ್ನುಡಿ, ಹಿನ್ನುಡಿಗಳಿಂದ ಸಂಪನ್ನವಾದ ಈ ಕೃತಿಯು ಸಂಗ್ರಹಯೋಗ್ಯವಾಗಿದೆ. ❃